

بِسْمِ اللّٰہِ الرَّحْمٰنِ الرَّحِیم

# ಮಸೀದಿ ನಿರ್ಮಾಣ ಮತ್ತು ನಮ್ಮ ಜವಾಬ್ದಾರಿಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಫ್ರಾನ್ಸ್‌ನ **'ಮಸ್ಜಿದ್ ಮಹದಿ'** ಯಿಂದ 11-10-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ-بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

إِنَّمَا يَعْمُرُ مَسَاجِدَ اللَّهِ مَنْ آمَنَ بِاللَّهِ وَالْيَوْمِ الْآخِرِ وَأَقَامَ الصَّلَاةَ وَآتَى الزَّكَاةَ وَلَمْ يَخْشَ إِلَّا اللَّهَ ۖ فَعَسَىٰ أُولَٰئِكَ أَنْ يَكُونُوا مِنَ الْمُهْتَدِينَ

**ಇನ್ನಮಾ ಯಅ್‌ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿಲ್ ಆಖಿರಿ, ವ ಅಖಾಮಸ್ಸಲಾತ ವ ಆತಝ್ಝಕಾತ ವಲಮ್ ಯಖ್‌ಶ ಇಲ್ಲಲ್ಲಾಹ ಫಅಸಾ ಊಲಾಯಿಕ ಅನ್‌ಯಕೂನೂ ಮಿನಲ್ ಮುಹ್ತದೀನ್.**

ಯಾರು ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ, ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೋ, ಝಕಾತ್ ನೀಡುತ್ತಾರೋ ಅಲ್ಲಾಹನಿಗೆ ಹೊರತು (ಬೇರೆ ಯಾರಿಗೂ) ಭಯಪಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಮಸ್‌ಜಿದ್‌ಗಳನ್ನು ಪರಿಪಾಲಿಸುವ ಹಕ್ಕುದಾರರು. ಅಂಥವರೇ ಮಾರ್ಗದರ್ಶನ ಹೊಂದಬಲ್ಲರು. (9:18).

ದೀರ್ಘಕಾಲದ ನಂತರ ಫ್ರಾನ್ಸಿನ ಅಹ್ಮದಿಯಾ ಜಮಾಅತಿನವರಿಗೆ ಇನ್ನೊಂದು ಮಸ್‌ಜಿದ್ ನಿರ್ಮಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಿದ್ದಾನೆ. ಇಲ್ಲಿ ವಾಸಿಸುವ ಅಹ್ಮದಿಯರು ಮೊದಲಿಗಿಂತ ಹೆಚ್ಚಿನ ಮಟ್ಟದಲ್ಲಿ ಜಮಾಅತಿನ ನಿಝಾಮ್‌ನೊಂದಿಗೆ ಸಂಪರ್ಕ ಸ್ಥಾಪಿಸಬಹುದಾಗಿದೆ. ಹಾಗೆ ಮಾಡಲು ಅಲ್ಲಾಹನು ಅವರಿಗೆ ಭಾಗ್ಯ ದಯಪಾಲಿಸಲಿ. ನಾನು ಪಠಿಸಿದ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅಲ್ಲಾಹನ ಬಗ್ಗೆ ಅಂತಿಮ ವಿಚಾರಣೆಯ ದಿನದ ಬಗ್ಗೆ, ನಂಬುವವರು, ನಮಾಝ್ ನಿಷ್ಠೆಯಿಂದ ನಿರ್ವಹಿಸುವವರು, ಝಕಾತ್ ನೀಡುವವರು, ಅಲ್ಲಾಹನ ಹೊರತು ಬೇರೆ ಯಾರಿಗೂ ಭಯಪಡದವರು ಮಸ್‌ಜಿದ್‌ಗಳನ್ನು ಜನನಿಬಿಡವಾಗಿ ಇರಿಸುತ್ತಾರೆ. ಅಂತಹ ಜನರು ಜಯದ ಕಡೆಗೆ ಒಯ್ಯಲ್ಪಡುವವರಾಗಿದ್ದಾರೆ.

ಮಸ್‌ಜಿದ್‌ಗಳನ್ನು ನಿರ್ಮಿಸುವವರ ಮತ್ತು ಅದನ್ನು ಜನನಿಬಿಡವನ್ನಾಗಿ ಮಾಡುವವರ ವೈಶಿಷ್ಟ್ಯಗಳಾಗಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅವರು ಅಲ್ಲಾಹನನ್ನು ನಂಬುವವರಾಗಿರುತ್ತಾರೆ. ಎಂದರೆ ಅಲ್ಲಾಹನು ಎಲ್ಲಾ ಶಕ್ತಿಗಳ ಮೂಲಸ್ಥಾನ ಎಂದೂ ಎಲ್ಲವುಗಳ ಮಾಲಿಕ ಅವನೆಂದೂ ದೃಢವಿಶ್ವಾಸ ಹೊಂದಿರುತ್ತಾರೆ. ಆದುದರಿಂದ ಈಮಾನ್ ಗಳಿಸಲು ಅಲ್ಲಾಹನ ಮುಂದೆ ಬಾಗುವುದು ಮತ್ತು ಅವನನ್ನು ಆರಾಧನೆ ಮಾಡುವುದು ಅತ್ಯಂತ ಆವಶ್ಯಕವಾಗಿದೆ. ಅಲ್ಲಾಹನು ತನ್ನ ಮುಂದೆ ಬಾಗುವವರ ವಿಶ್ವಾಸವನ್ನು ದೃಢಗೊಳಿಸುತ್ತಾನೆ ಮತ್ತು ವರ್ಧಿಸುತ್ತಾನೆ. ಮಸ್‌ಜಿದ್‌ಗೆ ಆಗಮಿಸುವ ಜನರ ಇನ್ನೊಂದು ವೈಶಿಷ್ಟ್ಯ ಅಂತಿಮ ವಿಚಾರಣೆಯ ದಿನದ ಬಗ್ಗೆ ಅವರು ದೃಢ ವಿಶ್ವಾಸ ಹೊಂದಿರುತ್ತಾರೆ ಎಂದು ಅಲ್ಲಾಹನು ಹೇಳಿದ್ದಾನೆ. ಅಂತಿಮ ವಿಚಾರಣೆಯ ದಿನದ ಬಗ್ಗೆ ಇರುವ ದೃಢವಿಶ್ವಾಸವೇ ಅಲ್ಲಾಹನನ್ನು ಆರಾಧಿಸುವ ಕಡೆಗೆ ಒಲವನ್ನುಂಟು ಮಾಡುತ್ತದೆ. ಅಲ್ಲಾಹನ ಸಂತೃಪ್ತಿಯನ್ನು ಮಾತ್ರ ಗಳಿಸಲು ಆರಾಧನೆ ಮಾಡಲು ಪ್ರೇರೇಪಿಸುತ್ತದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **ಈಮಾನ್ ಬಿಲ್ ಆಖಿರತ್** (ಪರಲೋಕದ ಬಗ್ಗೆ ವಿಶ್ವಾಸ) ಇದರ ಲಾಭವೇನೆಂದರೆ ಅದರ ಮೂಲಕ ಅಲ್ಲಾಹನ ಬಗ್ಗೆ ಸೂಕ್ಷ್ಮ ಜ್ಞಾನ ಲಭಿಸುತ್ತದೆ. ಸತ್ಯವಾದ ಜ್ಞಾನ ಲಭಿಸದಿದ್ದರೆ ವಾಸ್ತವಿಕ ದೇವಭಯ ಲಭಿಸಲಾರದು. ನೀವು ನೆನಪಿಡಿರಿ, ಪರಲೋಕದ ಬಗ್ಗೆ ಸಂಶಯಗಳು ಸತ್ಯವಿಶ್ವಾಸವನ್ನು ಅಪಾಯಕ್ಕೊಳಪಡಿಸುತ್ತದೆ. ಅಂತಿಮವಾದ ಉತ್ತಮ ಗತಿಯಲ್ಲಿ ರಂಧ್ರಗಳುಂಟಾಗುತ್ತವೆ. ವಾಸ್ತವಿಕ **ಆಬಿದ್** (ಆರಾಧನೆ ಮಾಡುವವ) ಮತ್ತು ಮಸ್‌ಜಿದನ್ನು ಜನನಿಬಿಡವನ್ನಾಗಿ ಮಾಡುವವನು ಹೃದಯದಲ್ಲಿ ಆಖಿರತ್ ಬಗ್ಗೆ ಎಂದಾದರೂ ಸಂಶಯವನ್ನು ಹೊಂದದವನು ಮಾತ್ರ. ಅವನು ತನ್ನ ಉತ್ತಮವಾದ ಅಂತಿಮ ಗತಿಯ ಬಗ್ಗೆ ಅಲ್ಲಾಹನ ಮುಂದೆ ಬಾಗುತ್ತಾ ಇರುವವನಾಗಿರುತ್ತಾನೆ.

ಅನಂತರ ಝಕಾತ್ ಬಗ್ಗೆ ಗಮನ ಹರಿಸಲಾಗಿದೆ. ಇದು ಆರ್ಥಿಕ ತ್ಯಾಗ ಮಾಡುವ ಬಗ್ಗೆಯಾಗಿದೆ. ಮಸ್‌ಜಿದ್‌ಗಳನ್ನು ಜನನಿಬಿಡವನ್ನಾಗಿ ಮಾಡುವವರು ಅಲ್ಲಾಹನ ಧರ್ಮದ ಪ್ರಚಾರಕ್ಕೋಸ್ಕರ ಬಲಿದಾನ ನೀಡುವವರಾಗಬೇಕು. ಅಲ್ಲಾಹನ ದಾಸರ ಹಕ್ಕುಗಳನ್ನೂ ಈಡೇರಿಸಬೇಕು. ಇವುಗಳೆಲ್ಲಾ ಮಾಡುವುದು ನಮ್ಮ ಹೃದಯಗಳಲ್ಲಿ ಅಲ್ಲಾಹನ ಬಗ್ಗೆ ಭಯ ವರ್ಧಿಸಲಿಕ್ಕೋಸ್ಕರವಾಗಿದೆ. ನಾವು ಅಲ್ಲಾಹನ ಸಂಪ್ರೀತಿ ಗಳಿಸಲು ಧಾರಾಳವಾಗಿ ಪ್ರಯತ್ನ ಮಾಡಬೇಕು. ಹೀಗೆಲ್ಲಾ ಮಾಡುವವರೇ ಅಲ್ಲಾಹನ ದೃಷ್ಟಿಯಲ್ಲಿ ಮಾರ್ಗದರ್ಶನ ಗಳಿಸಿದವರಾಗಿದ್ದಾರೆ ಎಂದು ಅಲ್ಲಾಹನು ಹೇಳುತ್ತಾನೆ. ಆದುದರಿಂದ ಮೊತ್ತ ಮೊದಲನೆಯದಾಗಿ ಪ್ರತಿಯೊಬ್ಬ ಅಹ್ಮದಿ ತನ್ನ ನಮಾಝ್ ಬಗ್ಗೆ ಪರಿಶೋಧಿಸುತ್ತಾ ಇರಬೇಕು. ಐದು ಹೊತ್ತಿನ ನಮಾಝ್ ಅನುಷ್ಠಿಸುವ ಬಗ್ಗೆ ನನಗೆ ಗಮನವಿದೆಯೋ, ಬಾಜಮಾಅತ್ ನಮಾಝ್ ಬಗ್ಗೆ ನಾನು ಗಮನ ಹರಿಸುತ್ತಿರುವೆನೋ ಎಂದು ಪರಿಶೋಧಿಸಬೇಕು. ನಾವು ಮಸ್‌ಜಿದನ್ನು ನಿರ್ಮಿಸುವುದು ಮಾತ್ರ ಸಾಕಾಗಲಾರದು. ಸ್ವರ್ಗದಲ್ಲಿ ಮನೆಯನ್ನು ನಿರ್ಮಿಸಲು ಕೇವಲ ಮಸ್‌ಜಿದ್ ನಿರ್ಮಾಣ ಸಾಕಾಗಲಾರದು. ಅದಕ್ಕೋಸ್ಕರ ಈಮಾನ್ ಜೊತೆಗೆ ಕರ್ಮಗಳೂ ಆವಶ್ಯಕವಾಗಿವೆ. ಅಲ್ಲಾಹನ ಅಜ್ಞೆಗಳ ಪ್ರಕಾರ ಕಾರ್ಯನಿರತರಾಗುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾರ ಜಮಾಅತಿನಲ್ಲಿ ಸೇರಿರುವ ಬಗ್ಗೆ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವುದು ಸಹ ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಆರಂಭದಿಂದಲೇ ನಮಗೆ ತಖ್ವದ ಉಪದೇಶ ನೀಡಿ ನಮಗೆ ಎಂತಹ ಗ್ರಂಥ ನೀಡಿದ್ದಾನೆಂದರೆ ಅದರಲ್ಲಿ ತಖ್ವದ ಬಗ್ಗೆ ಉಪದೇಶಗಳಿವೆ. ಆದುದರಿಂದ ನಮ್ಮ ಜಮಾಅತಿನ ಜನರು ಸಕಲ ಲೌಕಿಕ ಚಿಂತೆಗಳಿಗಿಂತ ಮಿಗಿಲಾಗಿ ತಮ್ಮ ಜೀವದ ಬಗ್ಗೆ ಚಿಂತಿಸಬೇಕು. ನಮ್ಮ ಜೀವಗಳಲ್ಲಿ ತಖ್ವ ಇದೆಯೋ ಇಲ್ಲವೋ ಎಂದು. ಮನುಷ್ಯನು ತನ್ನಲ್ಲಿ ತಖ್ವ ಇದೆಯೋ ಇಲ್ಲವೋ ಎಂದು ನೋಡುವುದು ಹೇಗೆ ಎಂಬುದರ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ವಚನಗಳಿಂದ ಹೀಗೆ ತಿಳಿಯುತ್ತದೆ, ಮುತ್ತಖಿಗಳು (ತಖ್ವ ಹೊಂದಿದವರು) ಸಹಿಷ್ಣುತೆಯಿಂದಲೂ ನಿಗರ್ವಿಗಳಾಗಿಯೂ ವರ್ತಿಸುತ್ತಾರೆ. ಅವರು ಅಹಂಭಾವ ಭರಿತ ಮಾತುಗಳನ್ನು ಆಡುವುದಿಲ್ಲ. ಅವರ ಮಾತು ಚಿಕ್ಕವರು ಹಿರಿಯರೊಂದಿಗೆ ಮಾತಾಡುವ ರೀತಿಯಲ್ಲಿರುತ್ತದೆ. ಅಲ್ಲಾಹನು ಯಾರ ಪಕ್ಷಪಾತಿಯೂ ಅಲ್ಲ. ಅವನು ತಖ್ವವನ್ನು ಇಚ್ಛಿಸುತ್ತಾನೆ. ಯಾರು ತಖ್ವವನ್ನು ಅನುಷ್ಠಿಸುತ್ತಾರೋ ಅವರು ಅತ್ಯುನ್ನತ ಸ್ಥಾನಕ್ಕೆ ತಲಪುವರು. ನಮ್ಮ ಯಜಮಾನರಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧತೆ ಮತ್ತು ನಿಷ್ಠೆಯನ್ನು ನೋಡಿರಿ. ಅವರು ಪ್ರತಿಯೊಂದು ರೀತಿಯ ಕೆಟ್ಟ ಪ್ರೇರೇಪಣೆಗಳನ್ನು ಎದುರಿಸಿದರು. ವಿವಿಧ ತರಗಳ ಕಷ್ಟಗಳನ್ನು ಅನುಭವಿಸಿದರು. ಆದರೆ ಅವುಗಳನ್ನು ಕಡೆಗಣಿಸಿದರು. ಅವರ ಈ ಸತ್ಯಸಂಧತೆ ಮತ್ತು ನಿಷ್ಠೆಯ ಕಾರಣದಿಂದಲೇ ಅಲ್ಲಾಹನು ಹೇಳಿದನು:

إِنَّ اللَّهَ وَمَلَائِكَتَهُ يُصَلُّونَ عَلَى النَّبِيِّ ۚ يَا أَيُّهَا الَّذِينَ آمَنُوا صَلُّوا عَلَيْهِ وَسَلِّمُوا تَسْلِيمًا

**ಇನ್ನಲ್ಲಾಹ ವ ಮಲಾಯಿಕತಹು ಯುಸಲ್ಲೂನ ಅಲನ್ನಬಿಯ್ಯಿ ಯಾ ಅಯ್ಯುಹಲ್ಲದೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್ಲೀಮಾ.**

ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲ್ಯೆ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ. (33:57).

ಆದುದರಿಂದ ಪ್ರಾರ್ಥನೆ ಅಂಗೀಕರಿಸಲ್ಪಡಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಬೇಕೆಂದು ನಮಗೆ ಆಜ್ಞಾಪಿಸಲಾಗಿದೆ. ದುರೂದ್ ರಹಿತವಾದ ಪ್ರಾರ್ಥನೆ ಆಕಾಶಕ್ಕೆ ತಲಪಲಾರದು. ಅದುದರಿಂದ ಆರಾಧನೆಗಳ ಮಟ್ಟವನ್ನು ಉತ್ತಮ ಪಡಿಸಲು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಲು ದುರೂದ್ ಆವಶ್ಯಕವಾಗಿದೆ. ದುರೂದ್ ಪ್ರಾರ್ಥನೆಯನ್ನು ಮಾಡುವವ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತ್ಯುತ್ಕೃಷ್ಟ ಮಾದರಿಯನ್ನು ತನ್ನ ಮುಂದೆ ಇರಿಸಿ ಪ್ರಾರ್ಥಿಸುವಾಗ ಅವನ ಗಮನ ಅವರ ಮಾದರಿಯನ್ನು ಅನುಸರಿಸುವ ಕಡೆಗೆ ಲಕ್ಷ್ಯ ನೀಡುತ್ತದೆ. ನಮ್ಮ ಸ್ಥಿತಿ ಹೀಗೆ ಆಗುವಾಗ ಅಲ್ಲಾಹನು ತನ್ನ ಪ್ರಿಯ ಪ್ರವಾದಿ ಮತ್ತು ಪ್ರಿಯ ದಾಸನ ಬಗ್ಗೆ ನಮ್ಮ ಪ್ರೀತಿಯ ಪ್ರಕಟಣೆ ಮತ್ತು ದುರೂದ್ ಅರ್ಪಣೆಯ ಕಾರಣದಿಂದ ನಮ್ಮ ಪ್ರಾರ್ಥನೆಗಳಿಗೆ ಅಂಗೀಕಾರದ ಪದವಿ ನೀಡುತ್ತಾನೆ. ಆಗ ನಾವು ಅಲ್ಲಾಹನ ಸಾಮೀಪ್ಯ ಪಡೆದು ಸಹಿಷ್ಣುತೆ ಮತ್ತು ವಿನಯಾನ್ವಿತರಾಗಿ ತಖ್ವದಲ್ಲಿ ಚಲಿಸುವವವರಾಗುತ್ತೇವೆ. ಇಂತಹ ಜನರೇ ಜಯಶಾಲಿಗಳಾಗುವರು.

ಇನ್ನು ನಮಾಝ್ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಐದು ಹೊತ್ತು ನಿರ್ವಹಿಸಲ್ಪಡುವ ನಮಾಝ್‌ನಲ್ಲಿ ಸಹ ಹೀಗೆ ಸೂಚನೆ ಇದೆ: ಇಂದ್ರಿಯಾಸಕ್ತಿಗಳ ಯೋಚನೆಗಳಿಂದ ಅದನ್ನು ಸುರಕ್ಷಿತವಾಗಿರಿಸುವ ತನಕ ಸತ್ಯವಾದ ನಮಾಝ್ ಖಂಡಿತವಾಗಿಯೂ ಆಗಲಾರದು. ನಮಾಝ್ ಎಂದರೆ ಬರೇ ಅಂಗವಿನ್ಯಾಸ ಮಾಡುವುದು ಮತ್ತು ಆಚಾರ, ಅಭ್ಯಾಸ ಪ್ರಕಾರ ನಿರ್ವಹಿಸುವಂತಹದು ಖಂಡಿತವಾಗಿಯೂ ಅಲ್ಲ. ನಮಾಝನ್ನು ಹೃದಯ ಸಹ ಅನುಭವಿಸಬೇಕು. ಆತ್ಮ ಕರಗಿ ಭಯದಿಂದ ಅಲ್ಲಾಹನ ಆಸ್ಥಾನದಲ್ಲಿ ಬಿದ್ದು ಬಿಡುವ ರೀತಿಯಲ್ಲಿರಬೇಕು. ಸಾಧ್ಯವಿರುವಷ್ಟು ಮಟ್ಟಿಗೆ ಅಳಲನ್ನು ಹುಟ್ಟಿಸಲು ಪ್ರಯತ್ನಿಸಬೇಕು. ವಿನಯಾನ್ವಿತನಾಗಿ ಬೇಡುವಾಗ ಆತ್ಮದಲ್ಲಿರುವ ತನ್ನಿಚ್ಛೆ ಮತ್ತು ಪಾಪ ದೂರ ಸರಿಯಬೇಕು. ಇಂತಹ ನಮಾಝ್ ಅನುಗ್ರಹಭರಿತವಾಗಿರುತ್ತದೆ. ಇದರಲ್ಲಿ ಸ್ಥಿರವಾಗಿದ್ದರೆ ರಾತ್ರಿ ಅಥವಾ ಹಗಲು ಒಂದು ಪ್ರಕಾಶ ಹೃದಯಕ್ಕೆ ಇಳಿದು ಬಂದುದಾಗಿ ಭಾವಿಸಲಾಗುವುದು ಮತ್ತು ದುಷ್ಪ್ರೇರಕ ಆತ್ಮದ ತನ್ನಿಚ್ಛೆ ಕಡಿಮೆಯಾಗುವುದು. ಆದುದರಿಂದ ಆತ್ಮವು ಕೆಡುಕುಗಳಿಂದ ರಕ್ಷಿಸಲ್ಪಡಲು ಸಹ ಅಲ್ಲಾಹನ ಅನುಗ್ರಹವನ್ನೇ ಬೇಡಿಕೊಳ್ಳಬೇಕು.

ನಮಾಝ್‌ನ ಮಹತ್ವವನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ನಮಾಝ್ ಆರಾಧನೆಗಳ ತಿರುಳು ಆಗಿದೆ. ಆದುದರಿಂದ ನಮಾಝ್ ಅನುಷ್ಠಿಸದೆ ಆರಾಧನೆಯ ಹೊಣೆಗಾರಿಕೆ ಈಡೇರಿಸಲ್ಪಡಲಾರದು ಎಂದು ನೆನಪಿಟ್ಟುಕೊಳ್ಳಬೇಕಾಗಿದೆ. ನಮಾಝ್ ಅನುಷ್ಠಾನಕ್ಕೆ ಸಂಬಂಧಿಸಿ ಕೆಲವು ಶರತ್ತುಗಳು ಸಹ ಇವೆ. ಆ ಶರತ್ತುಗಳನ್ನು ಈಡೇರಿಸಬೇಕಾದುದು ಆವಶ್ಯಕವಾಗಿದೆ. ನಾನು ಅಲ್ಲಾಹನ ಮುಂದೆ ವಿನಯಾನ್ವಿತನಾಗಿ ನಿಂತಿದ್ದೇನೆ ಎಂಬ ಯೋಚನೆ ಹೊಂದಿ ನಮಾಝ್ ನಿರ್ವಹಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಮನುಷ್ಯನು ಅಲ್ಲಾಹನನ್ನು ಭೇಟಿಯಾಗಲು ಇಚ್ಛಿಸುತ್ತಾನೆ. ಅವನ ಸಂಪ್ರೀತಿಯನ್ನು ಗಳಿಸುವ ಉದ್ದೇಶ ಹೊಂದಿರುತ್ತಾನೆ. ಅವನು ಆದರ ಭಾವದಿಂದಲೂ ವಿನಯಾನ್ವಿತನಾಗಿಯೂ ಮೆಚ್ಚುವ ರೀತಿಯಲ್ಲಿಯೂ ಅತ್ಯಂತ ತಲ್ಲೀನನಾಗಿಯೂ ಅಲ್ಲಾಹನ ಮುಂದೆ ನಿಂತು ಅಲ್ಲಾಹನ ಸಂಪ್ರೀತಿಯನ್ನು ಅಪೇಕ್ಷಿಸುತ್ತಾನೆ. ಅಂತಹ ಸ್ಥಿತಿ ಸಲಾತ್ ಆಗಿವೆ. ಪ್ರಾರ್ಥನೆ ವಾಸ್ತವಿಕ ರೂಪವೇನೆಂದರೆ ಅದರ ಮೂಲಕ ಮನುಷ್ಯನ ಮತ್ತು ಅಲ್ಲಾಹನ ಮಧ್ಯೆ ಸಂಬಂಧವು ವರ್ಧಿಸಬೇಕು. ಪ್ರಾರ್ಥನೆ ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವಾಗಿರುತ್ತದೆ. ಅದು ಮನುಷ್ಯನನ್ನು ಅನಾವಶ್ಯಕ ವಿಷಯಗಳಿಂದ ದೂರ ಸರಿಸುತ್ತದೆ. ಸಲಾತ್ ಎಂಬ ಶಬ್ದ ತಾಪವನ್ನು ಸೂಚಿಸುತ್ತದೆ. ಬೆಂಕಿಯಿಂದ ತಾಪ ಉಂಟಾಗುವ ಹಾಗೆ. ಇಂತಹ ತಾಪ ಪ್ರಾರ್ಥನೆಯಲ್ಲೂ ಹುಟ್ಟಬೇಕು. ಇಂತಹ

ಸ್ಥಿತಿಗೆ ತಲಪಿದರೆ ಅದು ಮೃತ್ಯುವಿನ ಸ್ಥಿತಿಯ ಹಾಗಿದೆ. ಆಗ ಅದರ ಹೆಸರು ಸಲಾತ್ ಎಂದಾಗುತ್ತದೆ. ನಮಾಝ್ ಅನುಷ್ಠಿಸುವ ವಾಸ್ತವಿಕ ಸ್ಥಿತಿ ಆ ರೀತಿ ಆಗಿದೆ. ಅಂತಹ ಸ್ಥಿತಿಯನ್ನು ಗಳಿಸಲು ಪ್ರಯತ್ನಿಸಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ನೀಡಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ನೆನಪಿಡಿರಿ, ನೀವು ವಿಶ್ವಾಸ ಹೊಂದಿರುವಿರೆಂದು ವಾದಿಸುವಿರಾದರೆ, ನಮಾಝ್‌ಗಳ ಅನುಷ್ಠಾನ ಆವಶ್ಯಕವಾಗಿದೆ. ಮೂರು ಅಥವಾ ನಾಲ್ಕು ನಮಾಝ್‌ಗಳನ್ನು ನಿರ್ವಹಿಸಿ ನಾನು ವಿಶ್ವಾಸಿ ಎಂದು ವಾದಿಸುವುದು ತಪ್ಪಾಗಿದೆ. ಏಕೆಂದರೆ ವಿಶ್ವಾಸದ ಬೇರು ನಮಾಝ್ ಆಗಿದೆ. ಬೇರು ಇಲ್ಲದಿದ್ದರೆ ಅದು ಸ್ವಲ್ಪ ಮಾತ್ರ ಗಾಳಿಯಿಂದ ಬಿದ್ದು ಬಿಡುವ ಪೊಳ್ಳು ಮರದ ಹಾಗಿರುತ್ತದೆ. ಕೆಲವು ಅವಿವೇಕಿಗಳು ಹೇಳುತ್ತಾರೆ: ಅಲ್ಲಾಹನಿಗೆ ನಮ್ಮ ನಮಾಝ್‌ಗಳ ಆವಶ್ಯಕತೆ ಏನಿದೆ? ಅವಿವೇಕಿಗಳೇ ಆಲಿಸಿರಿ, ಅಲ್ಲಾಹನಿಗೆ ನಿಮ್ಮ ನಮಾಝ್‌ಗಳ ಆವಶ್ಯಕತೆ ಇಲ್ಲ. ಆದರೆ ನಿಮಗೆ ನಮಾಝ್‌ಗಳ ಆವಶ್ಯಕತೆ ಇದೆ. ಅಲ್ಲಾಹನು ಗಮನಿಸುವಾಗ ಬಿಗಡಾಯಿಸಿದ ಕೆಲಸಗಳು ದುರುಸ್ತಿಯಾಗುತ್ತವೆ. ನಮಾಝ್‌ಗಳು ಅನೇಕ ತಪ್ಪುಗಳನ್ನು ದೂರ ಸರಿಸುತ್ತವೆ. ಅದು ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವಾಗುತ್ತದೆ.

ಒಳ್ಳೆಯ ಸಂಕಲ್ಪದಿಂದ ಮಸ್‌ಜಿದ್‌ಗೆ ಆಗಮಿಸುವವರ ಬಗ್ಗೆ ಮತ್ತು ಮಸ್‌ಜಿದ್‌ನಲ್ಲಿ ಕುಳಿತುಕೊಂಡು ನಮಾಝ್ ಸಮಯವನ್ನು ಪ್ರತೀಕ್ಷಿಸುತ್ತಾ ಇರುವವರ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ನಮಾಝ್ ಅನುಷ್ಠಿಸಲು ಕಾಯುತ್ತಾ ಮಸ್‌ಜಿದ್‌ನಲ್ಲಿ ಕುಳಿತಿರುವವನು ನಮಾಝ್ ಮಾಡುತ್ತಿರುವವನೇ ಆಗಿರುತ್ತಾನೆ. ದೇವ ದೂತರು ಅವನಿಗೋಸ್ಕರ ಪ್ರಾರ್ಥನೆ ಮಾಡುತ್ತಾರೆ. ಅವರು ಬೇಡಿಕೊಳ್ಳುತ್ತಾರೆ: ಓ ಅಲ್ಲಾಹ್, ಅವನ ಮೇಲೆ ದಯೆದೋರು. ಅವನನ್ನು ಕ್ಷಮಿಸು. ಅವನ ತೌಬ ಅಂಗೀಕರಿಸು.

ಆದುದರಿಂದ ಇಂತಹ ದಯಾಮಯ ದೇವನನ್ನು ಆರಾಧಿಸುವ ಹೊಣೆಗಾರಿಕೆಯನ್ನು ಈಡೇರಿಸಲು ನಾವು ಲಕ್ಷ್ಯವಿಟ್ಟು ಪ್ರಯತ್ನಿಸಬೇಕಾಗಿದೆ. ಐದು ಹೊತ್ತು ಮಸ್‌ಜಿದ್‌ಗೆ ಬರಲು ಪ್ರಯತ್ನಿಸಬೇಕಾಗಿದೆ. ಧರ್ಮದ ಉದ್ದೇಶ ಐಕ್ಯತೆಯನ್ನು ಸೃಷ್ಟಿಸುವುದಾಗಿದೆ ಎನ್ನುವುದನ್ನು ವಿಶದೀಕರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಅಲ್ಲಾಹನ ಇಚ್ಛೆ ಎಲ್ಲಾ ಮನುಷ್ಯರನ್ನು ಒಂದು ಜೀವವನ್ನಾಗಿ ಮಾಡುವುದಾಗಿದೆ. ಅದರ ಹೆಸರು **ವಹದತ್ ಜಮ್‌ಹೂರಿ** ಎಂದಾಗಿದೆ. ಬಾಜಮಾಅತ್ ನಮಾಝ್ ಸಹ ಈ ಐಕ್ಯತೆಗೋಸ್ಕರವಾಗಿದೆ – ಬಾಜಮಾಅತ್ ನಮಾಝ್ ಅನುಷ್ಠಿಸುವವರನ್ನು ಏಕ ಅಸ್ತಿತ್ವವಾಗಿ ಪರಿಗಣಿಸುವಂತಾಗಲು. ಜೊತೆ ಸೇರಿ ನಿಲ್ಲಲು ಅಜ್ಞಾಪಿಸಿರುವುದು ಏಕೆಂದರೆ ಯಾರಲ್ಲಿ ಹೆಚ್ಚು ಪ್ರಕಾಶವಿದೆಯೋ ಅದು ಬಲಹೀನನಾದವನಿಗೆ ವ್ಯಾಪಿಸಿ ಅವನನ್ನು ಸಹ ಬಲಿಷ್ಠನನ್ನಾಗಿ ಮಾಡಲಿಕ್ಕೋಸ್ಕರವಾಗಿದೆ. ಈ ವಹದತೆ ಜಮ್‌ಹೂರಿಯನ್ನು ಸೃಷ್ಟಿಸಲು ಮತ್ತು ನೆಲೆನಿಲ್ಲಿಸಲು ಅಲ್ಲಾಹನು ಮೊದಲು ಹೀಗೆ ಆಜ್ಞಾಪಿಸಿದನು. ಪ್ರತಿಯೊಂದು ಬಡಾವಣೆಯ ಜನರು ಐದು ಹೊತ್ತಿನ ನಮಾಝುನ್ನು ತಮ್ಮ ಬಡಾವಣೆಯ ಮಸ್‌ಜಿದ್‌ನಲ್ಲಿ ನಿರ್ವಹಿಸಬೇಕು. ಆ ಮೂಲಕ ಸ್ವಭಾವ ಗುಣಗಳ ವಿನಿಮಯವಾಗಿ ಪ್ರಕಾಶಗಳು ಒಗ್ಗೂಡಿ ಬಲಹೀನತೆಗಳು ದೂರಸರಿಯಲಿ. ಪರಸ್ಪರ ಪರಿಚಯವಾಗಿ ಪ್ರೀತಿ ವಿಶ್ವಾಸ ವರ್ಧಿಸಲಿ ಎಂದು. ಅನಂತರ ಎರಡನೆ ಆಜ್ಞೆ ಹೀಗೆ ನೀಡಲಾಯಿತು: ಜುಮುಅದ ದಿನ ಜಾಮಿಅ ಮಸ್‌ಜಿದ್‌ನಲ್ಲಿ ಜಮಾಯಿಸಿ ಪರಿಚಯ ಮತ್ತು ಐಕ್ಯತೆಯನ್ನು ವರ್ಧಿಸಬೇಕು ಎಂದು. ಅನಂತರ ವರ್ಷಕ್ಕೆರಡು ಸಲ ಈದ್ ದಿನಗಳಲ್ಲಿ ನಗರವಾಸಿಗಳೂ ಗ್ರಾಮವಾಸಿಗಳೂ ಜೊತೆ ಸೇರಿ ನಮಾಝ್ ಅನುಷ್ಠಿಸಬೇಕು. ಆಗ ಪ್ರೀತಿ ವಿಶ್ವಾಸ ವರ್ಧಿಸಿ ವಹದತ್ ಜಮ್‌ಹೂರಿ ಸೃಷ್ಟಿಸಲ್ಪಡುತ್ತದೆ. ಅನಂತರ ಲೋಕದ ಜನರೆಲ್ಲರೂ ತಮ್ಮ ಆಯುಸ್ಸಿನಲ್ಲಿ ಒಂದು ಸಲ ಮಕ್ಕದ ಮೈದಾನದಲ್ಲಿ ಜಮಾಯಿಸಿ ಹಜ್ ನಿರ್ವಹಿಸಲು ಅದಕ್ಕೆ ಅನುಕೂಲತೆ ಇದ್ದವರಿಗೆ ಆಜ್ಞಾಪಿಸಲಾಗಿದೆ. ಈ ರೀತಿ ಅಲ್ಲಾಹನು ಜನರ ಮಧ್ಯೆ ಪ್ರೀತಿ ವಿಶ್ವಾಸಗಳನ್ನು ವರ್ಧಿಸಲು ಇಚ್ಛಿಸುತ್ತಾನೆ. ಈ ಎಲ್ಲಾ ಸಮಾವೇಶಗಳ ಉದ್ದೇಶವೇನೆಂದರೆ ಒಬ್ಬನ ಪ್ರಕಾಶ ಇನ್ನೊಬ್ಬನ ಮೇಲೆ ಪ್ರಭಾವಿಸಿ ಅವನಿಗೆ ಶಕ್ತಿ ನೀಡಲಿಕ್ಕಾಗಿದೆ.

(ಹುಝೂರ್ ಸ್ಥಳೀಯ ಜನರೊಂದಿಗೆ ಹೇಳಿದರು:) ಅಲ್ಲಾಹನು ನಿಮಗೆ ಈ ಮಸ್‌ಜಿದ್ ದಯಪಾಲಿಸಿರುವಾಗ ನಿಮ್ಮ ಐಕ್ಯತೆಯ ದೃಶ್ಯಗಳು ಸಹ ಇಲ್ಲಿ ಕಾಣಿಸಬೇಕು. ಅಲ್ಲಾಹನ ಅನುಗ್ರಹದ ಲಾಭ ಪಡೆದು ಈ ಮಸ್‌ಜಿದನ್ನು ಜನರಿಂದ ತುಂಬಿಸಿರಿ. ಅಲ್ಲಾಹನು ನಮಗೆ ನೀಡಿದ ಅನುಗ್ರಹದ ಬಗ್ಗೆ ನಾವು ಅವಶ್ಯಕವಾದ ಶ್ರದ್ಧೆ ನೀಡುವುದಿಲ್ಲವಾದರೆ ಅದು ನಮ್ಮ ದುರ್ಭಾಗ್ಯವಾಗುತ್ತದೆ. ಪ್ರತಿಯೊಬ್ಬ ಅಹ್ಮದಿ ಇದರ ಬಗ್ಗೆ ಚಿಂತಿಸಬೇಕು. ಮಸ್‌ಜಿದ್‌ಗೆ ಬರಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನನ್ನ ಜಮಾಅತಿಗೆ ಸೇರಿದವವರಾಗಿ ಗಣಿಸುವ ಎಲ್ಲಾ ಜನರೇ, ನೀವು ಆಕಾಶದಲ್ಲಿ ನನ್ನ ಜಮಾಅತಿಗೆ ಸೇರಿದವರಾಗಿ ಗಣಿಸಲ್ಪಡಲು ನೀವು ಸತ್ಯವಾಗಿ ತಕ್ವದ ಮಾರ್ಗದಲ್ಲಿ ಹೆಜ್ಜೆ ಹಾಕುವವರಾಗಿರಬೇಕು. ನೀವು ಐದು ಹೊತ್ತಿನ ನಮಾಝುನ್ನು ಎಂತಹ ಭಯ ಮತ್ತು ಹೃದಯ ಸಾನ್ನಿಧ್ಯದೊಂದಿಗೆ ಅನುಷ್ಠಿಸಬೇಕೆಂದರೆ ನೀವು ಅಲ್ಲಾಹನನ್ನು ನೋಡುತ್ತಿರುವಿರೋ ಎಂಬಂತೆ. ನೀವು ನಿಮ್ಮ ಉಪವಾಸಗಳನ್ನು ಸತ್ಯದೊಂದಿಗೆ ಅಲ್ಲಾಹನಿಗೋಸ್ಕರ ಅನುಷ್ಠಿಸಿರಿ. ನೆನಪಿಡಿರಿ, ತಕ್ವ ರಹಿತವಾದ ಯಾವುದೇ ಕರ್ಮ ಅಲ್ಲಾಹನ ಬಳಿಗೆ ತಲಪಲಾರದು. ಪ್ರತಿಯೊಂದು ಒಳಿತಿನ ಬೇರು ತಕ್ವ ಆಗಿದೆ. ಯಾವ ಕರ್ಮದಲ್ಲಿ ಈ ಬೇರು ಇದೆಯೋ ಅದು ನಾಶವಾಗಲಾರದು. ನೀವು ಅಲ್ಲಾಹನ ಕೊನೆಯ ಜಮಾಅತಾಗಿರುವಿರಿ. ಆದುದರಿಂದ ನೀವು ಅತ್ಯುತ್ತಮ ಮಟ್ಟದ ಸತ್ಕರ್ಮಗಳನ್ನು ಮಾಡಿರಿ. ನಿಮ್ಮ ಪೈಕಿ ಉದಾಸೀನತೆ ಪ್ರಕಟಿಸುವ ಪ್ರತಿಯೊಬ್ಬನು ಕೊಳಕು ಪದಾರ್ಥದ ಹಾಗೆ ಜಮಾಅತ್‌ನಿಂದ ಹೊರಗೆ ಎಸೆಯಲ್ಪಡುವನು. ಅವನು ದುಃಖಿಸುತ್ತಾ ಸಾಯುವನು. ಅವನು ಅಲ್ಲಾಹನ ಕಾರ್ಯಗಳನ್ನು ಬಿಗಡಾಯಿಸಲಾರನು. ನೋಡಿರಿ, ನಾನು ಬಹಳ ಸಂತೋಷದಿಂದ ನಿಮಗೆ ಸಮಾಚಾರ ನೀಡುತ್ತಿದ್ದೇನೆ. ನಿಮ್ಮ ದೇವನು ವಾಸ್ತವಿಕವಾಗಿಯೂ ಅಸ್ತಿತ್ವದಲ್ಲಿದ್ದಾನೆ. ಎಲ್ಲರೂ ಅವನ ಸೃಷ್ಟಿಗಳಾಗಿದ್ದರೂ ಅವನ ಸಮೀಪಕ್ಕೆ ಹೋಗುವವನನ್ನು ಅವನು ಆಯ್ಕೆ ಮಾಡುತ್ತಾನೆ ಮತ್ತು ಗೌರವ ನೀಡುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ನೋವುಭರಿತ ಶಬ್ದಗಳನ್ನು ಮನವರಿಕೆ ಮಾಡಿಕೊಂಡು ನಮ್ಮ ಈಮಾನನ್ನು ವರ್ಧಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಇಬಾದತ್‌ಗಳನ್ನು ನಿರ್ವಹಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ. ಅಲ್ಲಾಹನೊಂದಿಗೆ ಜೀವಂತ ಸಂಬಂಧ ಸ್ಥಾಪಿಸುವ ಭಾಗ್ಯ ದಯಪಾಲಿಸಲಿ. ನಾವು ಈ ಮಸ್‌ಜಿದನ್ನು ಯಾವಾಗಲೂ ನಮಾಝ್‌ಗಳಿಂದ ಭರಿತವನ್ನಾಗಿ ಮಾಡುವವರಾಗಲಿ.

(ಹುಝೂರ್ ಮಸ್‌ಜಿದ್ ಬಗ್ಗೆ ಮಾಹಿತಿಗಳನ್ನು ನೀಡುತ್ತಾ ಹೇಳಿದರು:) ಈ ಮಸ್‌ಜಿದ್ ನಿವೇಶನ 2640 ಚದರ ಮೀಟರ್ ವಿಸ್ತೀರ್ಣ ಹೊಂದಿದೆ. ಇದರಲ್ಲಿ ಮೊದಲು ಹದಿನೈದು ಕೋಣೆಗಳಿರುವ ಒಂದು ಮೂರು ಮಹಡಿಯ ಕಟ್ಟಡವಿತ್ತು. ಒಂದು ದೊಡ್ಡ ಹಾಲ್ ಇತ್ತು. ಆರ್ಕಿಟೆಕ್ಟ್ ಒಂದು ಮಿಲಿಯ ಯೂರೋ ಮಸ್‌ಜಿದ್ ನಿರ್ಮಾಣದ ವೆಚ್ಚವಾಗಿ ಅಂದಾಜು ಮಾಡಿದ್ದರು. ಅದನ್ನು ಫ್ರಾನ್ಸಿನ ಖುದ್ದಾಮುಲ್ ಅಹ್ಮದಿಯಾ ಕೊಡುವುದಾಗಿ ವಾಗ್ದಾನ ಮಾಡಿದ್ದರು. ಆದರೆ ಅಲ್ಲಾಹನ ಅನುಗ್ರಹದಿಂದ ಈ ಮಸ್‌ಜಿದ್ ಐದು ಲಕ್ಷದ ಮೂವತ್ತು ಸಾವಿರ ಯುರೋ ವೆಚ್ಚದಿಂದ ಪೂರ್ಣಗೊಂಡಿತು.

ಈಗ ಈ ಮಸ್‌ಜಿದ್ ನಿರ್ಮಾಣಗೊಂಡಿದೆ. ಇನ್ನು ಮುಂದೆ ಲಜ್‌ನ ಮತ್ತು ಅನ್‌ಸಾರ್ ಒಟ್ಟಿಗೆ ಸೇರಿ ಮೂರು ವರ್ಷಗಳೊಳಗೆ ಒಂದು ಹೊಸ ಮಸ್‌ಜಿದ್ ನಿರ್ಮಿಸುವ ಹೊಣೆಗಾರಿಕೆ ಹೊಂದಬೇಕು. ನಿರ್ಮಿಸಲಾದ ಈ ಮಸ್‌ಜಿದ್‌ನಲ್ಲಿ 250 ಜನರು ನಮಾಝ್ ಮಾಡುವ ಸ್ಥಳವಿದೆ. 50 ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಇದೆ. ಇಲ್ಲಿ ಜಮಾಅತಿನ ಕಚೇರಿ, ಲಜ್‌ನ ಕಚೇರಿ ಇವೆ. ಪುರುಷರಿಗೂ ಮಹಿಳೆಯರಿಗೂ ಲೈಬ್ರರಿಗಳಿವೆ. ಇಲ್ಲೊಂದು ದೊಡ್ಡ ಪಾರ್ಕಿಂಗ್ ಹಾಲ್ ಸಹ ಇದೆ. ತುರ್ತು ಆವಶ್ಯಕತೆ ಇದ್ದಾಗ ಇದರಲ್ಲಿ 125 ಜನರು ನಮಾಝ್ ಮಾಡಬಹುದು. ಇಲ್ಲಿದ್ದ ಹಳೆಯ ಕಟ್ಟಡದ ಹದಿನೈದು ಕೋಣೆಗಳನ್ನು ದುರುಸ್ತಿ ಮಾಡಲಾಗಿದೆ. ಅದನ್ನು ಸಹ ಉಪಯೋಗಿಸಬಹುದಾಗಿದೆ. ಈ ಮಸ್‌ಜಿದ್ ಸ್ಟ್ರಾಸ್ ಬರ್ಗ್ ನಗರದಿಂದ ಅಂದಾಜು 15 ಕಿಲೋಮೀಟರ್ ದೂರದಲ್ಲಿದೆ. ಮಸ್‌ಜಿದ್ ಮತ್ತು ಹಾಲ್‌ಗಳ ಒಟ್ಟು ವಿಸ್ತೀರ್ಣ 303 ಚದರ ಮೀಟರ್ ಆಗಿದೆ. ಮುರಬ್ಬಿಗೆ ವಾಸಸ್ಥಳ ಇದೆ. ನಾಲ್ಕು ಕೋಣೆಗಳ ಗೆಸ್ಟ್ ಹೌಸ್ ಸಹ ಇದೆ. ಮಿನಾರ ರಚಿಸುವ ಅನುಮತಿ ಲಭಿಸಿಲ್ಲ. ಆದರೆ ಮಸ್‌ಜಿದ್‌ನ ಬಲಭಾಗದಲ್ಲಿ ಎಂಟು ಮೀಟರ್ ಎತ್ತರದ ಗುಂಬಜು ನಿರ್ಮಿಸುವ ಅನುಮತಿ ಲಭಿಸಿದೆ. ಅದು ಬಹಳ ಸುಂದರವಾಗಿದೆ. ಮಸ್‌ಜಿದ್‌ನಲ್ಲಿ ಮೆಹ್‌ರಾಬ್ ಇದೆ. ಅಲ್ಲಾಹನು ಎಲ್ಲಾ ವಿಧಗಳಲ್ಲಿ ಅನುಗ್ರಹಿಸಲಿ. ಮಸ್‌ಜಿದ್ ನಿರ್ಮಾಣಕ್ಕೆ ತ್ಯಾಗ ಮಾಡಿದ ಖುದ್ದಾಮ್‌ಗಳ ಸಂಪತ್ತಿನಲ್ಲೂ ಸಂತಾನದಲ್ಲೂ ಅಲ್ಲಾಹನು ಅನುಗ್ರಹ ನೀಡಲಿ. ಅವರಿಗೆ ಮಸ್‌ಜಿದ್ ನಿರ್ಮಿಸುವುದು ಮಾತ್ರವಲ್ಲ ಮಸ್‌ಜಿದನ್ನು ಜನರಿಂದ ತುಂಬಿಸುವ ಭಾಗ್ಯ ಸಹ ಲಭಿಸಲಿ. ಖುದ್ದಾಮ್‌ಗಳ ಇಬಾದತ್‌ನ ಮಟ್ಟ ಸಹ ವರ್ಧಿಸುವಂತಾಗಲಿ. ಜಮಾಅತಿನ ಸದಸ್ಯರ ಆಧ್ಯಾತ್ಮಿಕ ಮಟ್ಟ ಸಹ ವರ್ಧಿಸುತ್ತಾ ಮುಂದುವರಿಯಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَ نَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ- عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَ يَنْهٰى
عَنِ الْفَحْشَآءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-

***Friday Sermon delivered by Hadrath Khaleefatul Masih Al Khamis***(atba)
*At, Masjid Mahdi, Strasbourg,France. On 11-10-2019*
**Summarized by** *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** M.P Ibrahim |***Typing:*** U Basheer Ahmad
***Published By:*** Kannada Isha'at Team for Nazarath Nashr-O-Isha'ath, Qadian
**Email**: *khutuba.kannada@gmail.com*
**You can find all the Sermons archived at**: www.alislam.org/friday-sermon